ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಸೆಪ್ಟೆಂಬರ್ 22, 2015

# ಹಿರಿಯ ಪತ್ರಕರ್ತ ಅಲಿ ಹಫೀಜ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ

**ಬೆಂಗಳೂರು, ಸೆಪ್ಟೆಂಬರ್ 22:**

ಹಿರಿಯ ಪತ್ರಕರ್ತ ಶ್ರೀ ಅಲಿ ಹಫೀಜ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಉರ್ದು ಪತ್ರಿಕೋದ್ಯಮದ ದಿಗ್ಗಜರಾಗಿದ್ದ ಕೋಲಾರದ ಖಾದ್ರಿಪುರ ಮೂಲದ ಶ್ರೀ ಅಲಿ ಹಫೀಜ್ ಅವರು ಭಾಷಾ ಬಳಕೆಯಲ್ಲಿ ಉತ್ಕೃಷ್ಠತೆ ಕಾಯ್ದುಕೊಂಡು ಡೈಲಿ ಸಾಲಾರ್ ಪತ್ರಿಕೆಯ ಜನಪ್ರಿಯತೆ ಹಾಗೂ ವಿಶ್ವಾಸಾರ್ಹತೆಯನ್ನು ವೃದ್ಧಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದರು. ಸ್ನೇಹ–ಜೀವಿಯಾಗಿ ಎಲ್ಲರೊಡನೆ ಬೆರೆತು ಭಾವೈಕ್ಯತೆ ಮೆರೆಯುತ್ತಿದ್ದರು ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ವಸ್ತುನಿಷ್ಠ ಪತ್ರಿಕೋದ್ಯಮಕ್ಕೆ ಮತ್ತೊಂದು ಹೆಸರಾಗಿದ್ದ ಶ್ರೀ ಅಲಿ ಹಫೀಜ್ ಅವರು ಪತ್ರಿಕೋದ್ಯಮದಲ್ಲಿ ಪಾವಿತ್ರ್ಯತೆಗೆ ಮನ್ನಣೆ ದೊರಕಿಸಿಕೊಡುವಲ್ಲಿ ಯಶಸ್ವಿಯಾಗಿದ್ದರು. ಶಿಕ್ಷಣಕ್ಕೆ ಒತ್ತು ನೀಡಬೇಕೆಂಬ ಅಲ್–ಅಮೀನ್ ಚಳುವಳಿಯಲ್ಲಿ ಶ್ರೀ ಅಲಿ ಹಫೀಜ್ ಅವರ ಕೊಡುಗೆ ಸ್ಮರಣಾರ್ಹ ಎಂದು ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಜ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಎಂದು ಬಣ್ಣಿಸಿದ್ದಾರೆ.

*************

ಡಿ ಪಿ ಎಂ